**ಸಾಕ್ಷಿಯನ್ನು ದಿಃ *12/06/2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಪ್ರತಿವಾದಿಯ ಪರ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿನ ಸಂಗತಿಗಳು ಸತ್ಯವಾಗಿವೆ.

ನಾನು ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| ಅ.ನಂ. | ದಾಖಲೆಗಳು |
|---|---|
| **ನಿ.ಡಿ.1** | ದಿಃ24-02-2015 ರಂದು ಇತ್ಯರ್ಥಗೊಂಡಿರುವ ಡಬ್ಲ್ಯೂ.ಪಿ.ನಂ.65387-65396/2011, ಡಬ್ಲ್ಯೂ.ಪಿ.65404-65416/2011 ಮತ್ತು 65397-65403/2011 ರ ತೀರ್ಪಿನ 46 ಪುಟಗಳ ದೃಢಿಕೃತ ನಕಲು |
| **ನಿ.ಡಿ.2** | ದಿಃ04-09-2016 ರಂದು ಕರ್ನಾಟಕ ಗೃಹ ಮಂಡಳಿ ಸಹಾಯಕ ಕಾರ್ಯಪಾಲಕ ಅಭಿಯಂತರರು ವಾದಿಯ ತಂದೆಯಾದ ದ್ಯಾಮಪ್ಪನಿಗೆ ನೀಡಿರುವ ನೋಟೀಸು |
| **ನಿ.ಡಿ.3** | ಸದರಿ ಪ್ರತಿವಾದಿ ನಂ.2 ಇವರು ಹಿರೇಮಲ್ಲಿಗವಾಡ ಗ್ರಾಮದ 5 ಎಕರೆ 12 ಗುಂಟೆ ಜಮೀನಿನ ಕುರಿತು ವಾದಿ ತಂದೆ ದ್ಯಾಮಪ್ಪನಿಗೆ ಐದು ನಿವೇಶನಗಳನ್ನು ನೀಡಿರುವ ಕುರಿತು ಇರುವ ದಾಖಲೆ ದೃಢಿಕೃತ ನಕಲು |
| **ನಿ.ಡಿ.4** | ಪ್ರತಿವಾದಿ ನಂ.2 ದಿಃ04-09-2017 ರಂದು ವಿಶೇಷ ಭೂಸ್ವಾಧೀನಾಧಿಕಾರಿಗೆ ಬರೆದಿರುವ ಪತ್ರದ ದೃಢಿಕೃತ ನಕಲು |
| **ನಿ.ಡಿ.5** | ಸದರಿ ದಾವಾದಾಸ್ತಿ ಕುರಿತು ಪ್ರತಿವಾದಿ ನಂ.2 ಇವರ ಕಚೇರಿಯ ಟಿಪ್ಪಣಿ ಮತ್ತು ಆದೇಶದ ದೃಢಿಕೃತ ನಕಲು |
| **ನಿ.ಡಿ.6** | ವಾದಿಯ ತಂದೆ ಪೋತಿಯಾಗಿದ್ದು, ಅವರ ವಾರಸುದಾರರ ಹೆಸರುಗಳನ್ನು ಪ್ರತಿವಾದಿ ನಂ.2 ದಾಖಲಿಸಿಕೊಂಡ ದಾಖಲೆ ದೃಢಿಕೃತ ನಕಲು |
| **ನಿ.ಡಿ.7** | ಸದರಿ ವಾರಸುದಾರರಿಗೆ ವಾದಿಯ ತಂದೆ ಹೆಸರಿನಲ್ಲಿ ಕಾಯ್ದಿರಿಸಿದ ನಿವೇಶನಗಳ ಕುರಿತು ನೀಡಿದ ವಿವರಗಳ ಕುರಿತು ಇರುವ ದಾಖಲೆ ದೃಢಿಕೃತ ನಕಲು |
| **ನಿ.ಡಿ.8** | ಸದರಿ ಗೃಹ ಮಂಡಳಿಗೆ ಪ್ರಸ್ತುತ ವಾದಿ ದಿಃ30-06-2017 ರಂದು ನೀಡಿರುವ ಎರಡು ಪುಟಗಳ ಪ್ರಮಾಣಪತ್ರದ ದೃಢಿಕೃತ ನಕಲು |
| **ನಿ.ಡಿ.9** | ದಿಃ01-07-2017 ರಂದು ಪ್ರಸ್ತುತ ವಾದಿಯು 2 ನೇ ಪ್ರತಿವಾದಿಗೆ ನಿವೇಶನ ಹಂಚಿಕೆ ಕುರಿತು ಬರೆದಿರುವ ಪತ್ರದ ದೃಢಿಕೃತ ನಕಲು |
| **ನಿ.ಡಿ.10** | 205 ನಿವೇಶನಗಳ ಹಂಚಿಕೆಯ ಎರಡು ಪುಟಗಳ ವಿವರಗಳ ಪಟ್ಟಿಯ ದೃಢಿಕೃತ ನಕಲು |

ಆದುದರಿಂದ ಪ್ರಮಾಣಪತ್ರ ಮತ್ತು ದಾಖಲೆಗಳನ್ನು ಪರಿಶೀಲಿಸಿ ದಾವೆಯನ್ನು ವಜಾಗೊಳಿಸಬೇಕಾಗಿ ವಿನಂತಿ.

***ಪಾಟೀ ಸವಾಲು ಃ ವಾದಿಯ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.